ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ

ಸಿ ಆರ್ ಪಿ ಸಿ 67

(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 40/2017 CW- 6 PW- 3

| | |
|---|---|
| ಹೆಸರು | ಬೀಬಿಜಾನ್ |
| ಗಂಡನ ಹೆಸರು | ಖಾಜಾ ಮೈನುದ್ದೀನ್ |
| ವಯಸ್ಸು | 42 |
| ಉದ್ಯೋಗ | ಮನೆ ಕೆಲಸ |
| ವಾಸ ಸ್ಥಳ | ಸಿಂಧನೂರು. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 09-03-2022

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

2016 ರಲ್ಲಿ ನನಗೆ ಅಂಗವಿಕಲರ ಮಾಶಾಸನ ಅಂತ ತಿಂಗಳಿಗೆ ರೂ. 400.00 ಕರ್ನಾಟಕ ಸರ್ಕಾರದಿಂದ ಬರುತ್ತಿತ್ತು, ಈಗ ರೂ. 600.00 ಬರುತ್ತದೆ. ಸದರಿ ಮಾಶಾಸನ ನನಗೆ 2016 ರಲ್ಲಿ ಸರಿಯಾಗಿ ಬಂದಿರುತ್ತದೆ. 2010 ರಲ್ಲಿ ಆರೋಪಿ ಮಾಶಾಸನ ತಂದು ಕೊಡುತ್ತಿದ್ದ. ಇಷ್ಟನ್ನು ಹೊರತುಪಡಿಸಿ ನನಗೆ ಬೇರೆ ಏನೂ ಗೊತ್ತಿಲ್ಲ. ನಾನು ಪ್ರತಿ ತಿಂಗಳು ಮಾಶಾಸನ ಬಂದಾಗ ಸಹಿ ಮಾಡಿ ತೆಗೆದುಕೊಳ್ಳುತ್ತಿದ್ದೆ. ನಾನು ಹೆಬ್ಬೆಟ್ಟಿನ ಸಹಿ ಮಾಡುತ್ತಿರಲಿಲ್ಲ. ನಿ.ಪಿ. 5 ಕ್ಕೆ ನಾನು ಹೆಬ್ಬೆಟ್ಟು ಸಹಿ ಮಾಡಿರುವುದಿಲ್ಲ. ನಾನು ಇಂಗ್ಲೀಷಿನಲ್ಲಿ ಬೀಬಿಜಾನ್ ಅಂತಾ ಬರೆಯುತ್ತಿದ್ದೆ. ಈಗ ನ್ಯಾಯಾಲಯದಲ್ಲಿರುವ ಆರೋಪಿ ಅಮರೇಶ ನಾಯಕ ಪೋಸ್ಟ್‌ಮನ್ ಇರುತ್ತಾನೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಘಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

ಪಾಟೀ ಸವಾಲು ಃ ಸಸಅ ಅವರಿಂದ

2010 ರಲ್ಲಿ ಆರೋಪಿ ನಮ್ಮ ಕಾಲೋನಿಯಲ್ಲಿ ಅಂಚೆ ಪತ್ರ ಬಟವಾಡೆ ಮಾಡಲು ಮತ್ತು ಮನಿ ಆರ್ಡರ್ ಹಣ ಸಂದಾಯ ಮಾಡಲು ಬರುತ್ತಿದ್ದರು ಎಂದರ ಸರಿ. ನಾನು ನಿ.ಪಿ. 5 ರಲ್ಲಿ ಹೆಬ್ಬೆಟ್ಟಿನ ಸಹಿ ಮಾಡಿ ರೂ. 800.00 ಹಣ ದಿ: 20/05/2010 ರಂದು ಪಡೆದುಕೊಂಡಿಲ್ಲ ಅಂತಾ ಹೇಳಿರುತ್ತೇನೆ ಎನ್ನುವುದು ಸರಿ. ನಾನು ಯಾವಾಗಲೂ ಇಂಗ್ಲೀಷಿನಲ್ಲಿ ಸಹಿ ಮಾಡಿ ಮಾಶಾಸನ ಪಡೆದುಕೊಳ್ಳುತ್ತಿದ್ದೆ ಅಂತಾ ಹೇಳಿದ್ದೇನು ಎಂದರೆ ಸರಿಯಲ್ಲ.

ಆರೋಪಿ 2010 ಮಾರ್ಚ್ ಮತ್ತು ಎಪ್ರೀಲ್ ಮಾಶಾಸನವನ್ನು ನನಗೆ ಕೊಡದೇ ನಿ.ಪಿ. 3 ರಲ್ಲಿ ತೋರಿಸಿದಂತೆ ಹಣವನ್ನು ಕೊಡದೇ ತಾನೇ ಹೆಬ್ಬೆಟ್ಟು ಸಹಿ ಮಾಡಿ ತೆಗೆದುಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಂಬಿಕ ದ್ರೋಹ ಮಾಡಿರುತ್ತಾನೆ ಅಂತಾ ಹೇಳಿಕೆ ನೀಡಿರುತ್ತಾನೆ ಎಂದರೆ ಸರಿಯಲ್ಲ. ಈ ಕುರಿತು ದಿ: 11/06/2016 ರಂದು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ. 23 ಎಂದು, ಹೇಳಿಕೆಯ ಭಾಗವನ್ನು ನಿ.ಪಿ. 23(ಎ) ಎಂದು ಗುರುತಿಸಲಾಯಿತು. ನಿ.ಪಿ. 23(ಎ) ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿ ಪರ ಶ್ರೀ. ಎಂ.ಎ.ಹೆಚ್. ವಕೀಲರಿಂದ</u>

ನನಗೆ ಮೈ ಹುಷಾರು ಇಲ್ಲದಾಗ ನಾನು ಹೆಬ್ಬಟ್ಟು ಹಾಕಿ ಹಣ ಪಡೆಯುತ್ತಿದ್ದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

**ಓ ಹೇ ಕೇ ಸರಿ ಇದೆ,**

ಪ್ರಧಾನ ಸಿವಿಲ್ ನ್ಯಾಯಾಧೀಶರು. ಸಿಂಧನೂರು.

ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ

ಸಿ ಆರ್ ಪಿ ಸಿ 67

(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

## ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ **40/2017** CW-8 PW- 4

| | |
|---|---|
| ಹೆಸರು | ಫರೀದಾ ಬೇಗಂ |
| ತಂದೆಯ ಹೆಸರು | ದಸ್ತಗಿರಿಸಾಬ್ |
| ವಯಸ್ಸು | 42 |
| ಉದ್ಯೋಗ | ಟೈಲರ್ |
| ವಾಸ ಸ್ಥಳ | ಸಿಂಧನೂರು. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 09-03-2022

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

2010 ರಲ್ಲಿ ನನಗೆ ಕರ್ನಾಟಕ ಸರ್ಕಾರದಿಂದ ತಿಂಗಳಿಗೆ ರೂ. 1000.00 ಅಂಗವಿಕಲರ ಮಾಶಾಸನ ಬರುತ್ತಿತ್ತು. ಆರೋಪಿ ಪೋಸ್ಟ್‌ಮನ್ ಆಗಿದ್ದ ಆತ ಸದರಿ ಮಾಶಾಸನವನ್ನು ತಂದು ಕೊಡುತ್ತಿದ್ದ, ನಾನು ಹೊರಗೆ ಬರುತ್ತಿರಲಿಲ್ಲ ಆದ್ದರಿಂದ ನನ್ನ ತಾಯಿ ಹಣ ತೆಗೆದುಕೊಳ್ಳುತ್ತಿದ್ದರು. ಇಷ್ಟನ್ನು ಹೊರತುಪಡಿಸಿ ನನಗೆ ಬೇರೆ ಏನೂ ಗೊತ್ತಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ, ಹೇಳಿಕೆ ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

ಪಾಟೀ ಸವಾಲು ಃ ಸಸಅ ಅವರಿಂದ

2010 ಜನೇವರಿಯಲ್ಲಿ ಆರೋಪಿ ನಮ್ಮ ಕಾಲೋನಿಗೆ ಅಂಚೆ ಪತ್ರಗಳನ್ನು ಬಟಾವಡೆ ಮಾಡಲು ಮತ್ತು ಮನಿ ಆರ್ಡರ್ ಸಂದಾಯ ಮಾಡಲು ಬರುತ್ತಿದ್ದರು ಎಂದರೆ ಸರಿ. 7 ನೇ ತಿಂಗಳು 2010 ರಲ್ಲಿ ನನ್ನ ರೂ. 2000.00 ಮಾಶಾಸನ ಬಂದಿಲ್ಲ ಎಂದರೆ ಸರಿಯಲ್ಲ. ಎಂ.ಓ. ಸಂ. 4163/49 ದಿ: 12/07/2010 ನ್ನು ನೋಡಿದಾಗ ಅದರಲ್ಲಿ ರೂ. 2000.00 ಹಣ ನಾನು

ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವಾಗಲೂ ಹಿಂದಿಯಲ್ಲಿ ಫರೀದಾಬೇಗಂ ಅಂತಾ ಸಹಿ ಮಾಡುತ್ತೇನೆ ಎಂದರೆ ಸರಿ. ಹೆಬ್ಬೆಟ್ಟನ್ನು ಸಹ ಮಾಡುತ್ತೇನೆ. ಮೇ ಮತ್ತು ಜೂನ್ 2010 ರ 2 ತಿಂಗಳ ಮಾಶಾಸನ ನನಗೆ ಮುಟ್ಟಿರುವುದಿಲ್ಲ ಎನ್ನುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಮುಟ್ಟಿದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ. 24 ಎಂದು, ಹೇಳಿಕೆಯ ಭಾಗವನ್ನು ನಿ.ಪಿ. 24(ಎ) ಎಂದು ಗುರುತಿಸಲಾಯಿತು. ನಿ.ಪಿ. 24(ಎ) ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿ ಪರ ಶ್ರೀ. ಎಂ.ಎ.ಹೆಚ್. ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.</u>

<u>ಮರು ವಿಚಾರಣೆ ಇಲ್ಲ.</u>

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

**ಓ ಹೇ ಕೇ ಸರಿ ಇದೆ,**

ಪ್ರಧಾನ ಸಿವಿಲ್ ನ್ಯಾಯಾಧೀಶರು. ಸಿಂಧನೂರು.

ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ

ಸಿ ಆರ್ ಪಿ ಸಿ 67

(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 40/2017 CW-10 PW- 5

| | |
|---|---|
| ಹೆಸರು | ಪ್ಯಾರಿಜಾನ್ |
| ತಂದೆಯ ಹೆಸರು | ಮಹ್ಮದ್ ಗಜನಿಸಾಬ್ |
| ವಯಸ್ಸು | 36 |
| ಉದ್ಯೋಗ | ಮನೆಕೆಲಸ |
| ವಾಸ ಸ್ಥಳ | ಸಿಂಧನೂರು. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 09-03-2022

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ನಾನು 12 ವರ್ಷದಿಂದ ಕರ್ನಾಟಕ ಸರ್ಕಾರದಿಂದ ಬರುವ ಮಾಶಾಸನವನ್ನು ತೆಗೆದುಕೊಳ್ಳುತ್ತಿದ್ದೇನೆ. 2010 ರಲ್ಲಿ ಪ್ರತಿ ತಿಂಗಳು ರೂ. 1000.00 ಮಾಶಾಸನ ಬರುತ್ತಿತ್ತು. 2010 ರಲ್ಲಿ ಮಾಶಾಸನವನ್ನು ಆರೋಪಿ ತಂದುಕೊಡುತ್ತಿದ್ದ. ನನಗೆ 2010 ರಲ್ಲಿ ಮೇ ಮತ್ತು ಜೂನ್ ತಿಂಗಳಿನ ಮಾಶಾಸನ ಬಂದಿರಲಿಲ್ಲ. ಆ ಕಾರಣಕ್ಕಾಗಿ ನಾನು ಏನೂ ಮಾಡಿಲ್ಲ, ಪೋಲೀಸರಿಗೆ ಹೇಳಿಕೆ ನೀಡಿಲ್ಲ. ನಾನು ಆರೋಪಿಯಿಂದ ಹಣ ಪಡೆಯಲು ಸಹಿಯನ್ನು ಇಂಗ್ಲೀಷಿನಲ್ಲಿ ಮಾಡುತ್ತಿದ್ದೆ. ಒಂದೊಂದು ಸಲ ಹೆಬ್ಬೆಟ್ಟಿನ ಸಹಿ ಮಾಡುತ್ತಿದ್ದೆ. ನನಗೆ ಹಣ ತಂದುಕೊಡುತ್ತಿದ್ದ ಪೋಸ್ಟ್‌ಮನ್ ಈಗ ನ್ಯಾಯಾಲಯದ ಮುಂದೆ ಇರುತ್ತಾನೆ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

ಪಾಟೀ ಸವಾಲು ಃ ಸಸಅ ಅವರಿಂದ

ಸದರಿ ಮೇ ಮತ್ತು ಜೂನ್ 2010 ರ 2 ತಿಂಗಳ ಮಾಶಾಸನವನ್ನು ಮನಿ ಆರ್ಡರ್ ಸಂ. 4163/48 ದಿ: 12/07/2010 ರಲ್ಲಿ ಆರೋಪಿಯೇ ಹಣ ಕೊಡದೇ ತಾನೇ ಹೆಬ್ಬೆಟ್ಟು ಸಹಿ ಮಾಡಿ ಬಳಸಿಕೊಂಡಿರುತ್ತಾನೆ ಎನ್ನುವುದು ಸರಿ. ಆರೋಪಿ ಸದರಿ ಹಣವನ್ನು ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ಮೋಸ ಮಾಡಿರುತ್ತಾನೆ ಎಂದರೆ ಸರಿ.

<u>ಪಾಟೀ ಸವಾಲು : ಆರೋಪಿ ಪರ ಶ್ರೀ. ಎಂ.ಎ.ಹೆಚ್. ವಕೀಲರಿಂದ</u>

2010 ಮೇ ಮತ್ತು ಜೂನ್ ಎರಡು ತಿಂಗಳ ಹಣ ತೆಗೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಒಂದುವರೆ ವರ್ಷ ನನಗೆ ಹಣ ಬಂದಿಲ್ಲ ಅಂತಾ ನುಡಿಯುತ್ತಾರೆ. ಯಾಕೆ ಬಂದಿಲ್ಲ ಅಂತಾ ವಿಚಾರಿಸಿದಾಗ ಮಧ್ಯಂತರ ಅಂತಾ ಆದೇಶ ಬಂದಿತ್ತು ಅದಕ್ಕೆ ಬಂದಿಲ್ಲ. ನಾನು ನಂತರ ಮತ್ತೊಮ್ಮ ಅರ್ಜಿ ಹಾಕಿ ರೆನ್ಯೂವಲ್ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ರೆನ್ಯೂವಲ್ ಮಾಡಿಸಿಕೊಂಡ ನಂತರ ಎಲ್ಲಾ ಹಣ ಬಂದಿರುತ್ತದೆ ಎಂದರೆ ಸರಿಯಲ್ಲ. ಈಗ ತಿಂಗಳು ತಿಂಗಳು ಬರುತ್ತದೆ ಎನ್ನುವುದು ಸರಿ. ನಂತರವೂ ಸಹ 2010 ರ ಮೇ ಮತ್ತು ಜೂನಿನ ಮಾಶಾಸನ ನನಗೆ ಬಂದಿಲ್ಲ. ಆ ಕುರಿತು ನಾನು ಪೊಸ್ಟ್ ಆಫೀಸಿಗೆ ದೂರು ನೀಡಿಲ್ಲ. ಆ ಎರಡು ತಿಂಗಳ ಹಣ ಏಕೆ ಬಂದಿಲ್ಲ ಅಂತಾ ವಿಚಾರಣೆ ಮಾಡಿಲ್ಲ. ಆ ಎರಡು ತಿಂಗಳ ಹಣ ತೆಗೆದುಕೊಂಡಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ನನಗೆ ನೆನಪಿಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು. ಸಿಂಧನೂರು.

ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ

ಸಿ ಆರ್ ಪಿ ಸಿ 67

(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 40/2017 CW-5 PW- 6

| | |
|---|---|
| ಹೆಸರು | ಮುರುಗೇಶ್ |
| ತಂದೆಯ ಹೆಸರು | ಹುಚ್ಚಯ್ಯಸ್ವಾಮೀ |
| ವಯಸ್ಸು | 35 |
| ಉದ್ಯೋಗ | ಕಿರಾಣಿ ಅಂಗಡಿ |
| ವಾಸ ಸ್ಥಳ | ಎ.ಕೆ. ಗೋಪಾಲ್‌ನಗರ, ಸಿಂಧನೂರು. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 09-03-2022

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ನನ್ನ ತಂದೆ ದಿ: 18/06/2009 ರಂದು ತೀರಿಕೊಂಡಿರುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ ಅವರಿಗೆ ಕರ್ನಾಟಕ ಸರ್ಕಾರದಿಂದ ತಿಂಗಳಿಗೆ ರೂ. 400.00 ವೃದ್ದಾಪ್ಯ ವೇತನ ಬರುತ್ತಿತ್ತು. ನಮ್ಮ ತಂದೆ ಬದುಕಿದ್ದಾಗ ಪೋಸ್ಟ್‌ಮನ್ ಹಣ ತಂದುಕೊಡುತ್ತಿದ್ದ. ನನ್ನ ತಂದೆ ತೀರಿಕೊಂಡ ನಂತರ ಪೋಸ್ಟಮನ್ ವೃದ್ದಾಪ್ಯ ವೇತನ ಕೊಡಲು ನಮ್ಮ ಮನೆಗೆ ಬಂದಿದ್ದ, ನಾವು ನಮ್ಮ ತಂದೆ ತೀರಿಕೊಂಡಿರುತ್ತಾನೆ ಹಣ ಬೇಡ ಅಂತಾ ಹೇಳಿರುತ್ತೇವೆ. ನಂತರ ಯಾರೂ ನಮ್ಮ ಮನೆಗೆ ಬಂದಿಲ್ಲ. 2010 ರಲ್ಲಿ ನಮ್ಮ ಕಾಲೋನಿಗೆ ಯಾರು ಪೋಸ್ಟ್‌ಮನ್ ಇದ್ದರು ನನಗೆ ಗೊತ್ತಿಲ್ಲ. ನನಗೆ ಪೋಲೀಸರು ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

ಪಾಟೀ ಸವಾಲು ಃ ಸಸಅ ಅವರಿಂದ

2010 ರಲ್ಲಿ ನಮ್ಮ ಕಾಲೋನಿಗೆ ಅಮರೇಶ ನಾಯಕ ಪೋಸ್ಟ್‌ಮನ್ ಇದ್ದರು ಎಂದರೆ ಸರಿ. ಈಗ ಅವರು ನ್ಯಾಯಾಲಯದ ಮುಂದೆ ಇರುತ್ತಾರೆ ಎಂದರೆ ಸರಿ. ಅವರು ಅಂಚೆ ಪತ್ರಗಳನ್ನು ಬಟಾವಡೆ ಮಾಡಲು ಮತ್ತು ಮನಿಆರ್ಡರ್‌ಗಳನ್ನ ಸಂದಾಯ ಮಾಡಲು ಬರುತ್ತಿದ್ದರು ಎಂದರೆ ಸರಿ. 2010 ರಲ್ಲಿ ಆರೋಪಿ ನಮ್ಮ ತಂದೆಯ ಸಹಿಯ ಬದಲಾಗಿ ಅವರೇ ಹೆಬ್ಬೆಟ್ಟಿನ ಸಹಿ ಮಾಡಿ ವೃದ್ಧಾಪ್ಯ ವೇತನವನ್ನು ಪಡೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ನಿ.ಪಿ. 4 ರಲ್ಲಿರುವ ಹೆಬ್ಬೆಟ್ಟಿನ ಗುರುತು ನನ್ನ ತಂದೆಯದ್ದಲ್ಲ, ಏಕೆಂದರೆ ಅವರು ಜೀವಂತ ಇರಲಿಲ್ಲ. ನನ್ನ ತಂದೆ ಬದುಕಿದ್ದಾಗ ಹೆಬ್ಬೆಟ್ಟು ಒತ್ತುತ್ತಿರಲಿಲ್ಲ, ಸಹಿ ಮಾಡಿ ವೃದ್ಧಾಪ್ಯ ವೇತನ ಪಡೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆ 2009 ರಲ್ಲಿ ತೀರಿಕೊಂಡಿದ್ದರೂ ಸಹ ಸರ್ಕಾರದಿಂದ ಬಂದ ಹಣವನ್ನು ಮರಳಿ ಕಳುಹಿಸದೇ ಆರೋಪಿ ಹಣ ದುರುಪಯೋಗಪಡಿಸಿಕೊಂಡಿದ್ದಾನೆ ಎಂದರೆ ಸರಿ. ಸರ್ಕಾರಕ್ಕೆ ನಂಬಿಕೆ ದ್ರೋಹ ಮಾಡಿದ್ದಾನೆ ಎಂದರೆ ಸರಿ.

<u>ಪಾಟೀ ಸವಾಲು : ಆರೋಪಿ ಪರ ಶ್ರೀ. ಎಂ.ಎ.ಹೆಚ್. ವಕೀಲರಿಂದ</u>

2010 ರಲ್ಲಿ ನನಗೆ 22 ವರ್ಷ ವಯಸ್ಸು ಇತ್ತು. ನನಗೆ ಕಾನೂನಿನ ಜ್ಞಾನ ಇತ್ತು ಎನ್ನುವುದು ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಪೋಸ್ಟ್ ಆಫೀಸಿಗೆ ಹೋಗಿ ತಿಳಿಸಿರುತ್ತೇವೆ ಆದರೆ ಅರ್ಜಿ ಕೊಟ್ಟಿರುವ ಕುರಿತು ನೆನಪಿಲ್ಲ. ಸದರಿ ನಮ್ಮ ತಂದೆಯ ವೃದ್ಧಾಪ್ಯ ವೇತನವನ್ನು ತೆಗೆದುಕೊಳ್ಳಬೇಕು ಅಂತಾ ನನ್ನ ತಂದೆ ಸತ್ತ ವಿಷಯವನ್ನು ಮುಚ್ಚಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಬ್ಬೆಟ್ಟನ್ನು ನನ್ನ ತಾಯಿಯೇ ಒತ್ತಿ ಹಣ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಹಣವನ್ನು ನನ್ನ ತಾಯಿಗೆ ಕೊಟ್ಟಿರುತ್ತಾರೆ ಆ ವಿಷಯ ನನಗೆ ಗೊತ್ತಿಲ್ಲ ಎನ್ನುವುದು ಸರಿ. ಆರೋಪಿಯನ್ನು ನಾನು ಇವತ್ತೇ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಸರ್ಕಾರಕ್ಕೆ ಆರೋಪಿ ನಂಬಿಕೆ ದ್ರೋಹ ಮಾಡಿದ್ದಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

**ಓ ಹೇ ಕೇ ಸರಿ ಇದೆ,**

ಪ್ರಧಾನ ಸಿವಿಲ್ ನ್ಯಾಯಾಧೀಶರು. ಸಿಂಧನೂರು.